OS No.34/2015

P.W-1

## **ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ**

ದಿನಾಂಕಃ 21.08.2024 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ: ವಾದಿ ಪರ ವಕೀಲರಿಂದ,**

ನಾನು ನನ್ನ ದಾವೆಗೆ ಸಂಬಂಧಿಸಿದಂತೆ ದಾವಾ ಆಸ್ತಿಗೆ ಸಂಬಂಧಿಸಿದ ಒಂದು ಪಹಣಿ ಮತ್ತು ಒಂದು ಎಂ.ಆರ್ ದಾಖಲೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ-1 ಮತ್ತು 2 ಎಂದು, ದಿನಾಂಕ 05.02.2009 ರ ದಾನ ಪತ್ರದ ದಾಖಲೆಯನ್ನು ಮೂಲ ದಾಖಲೆಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ- 3 ಎಂದು, ಸದರಿ ದಾಖಲೆಯಲ್ಲಿ ನನ್ನ ಸಹಿ ಇದ್ದು ಸದರಿ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಪಿ.ಮಹೇಬೂಬ್, ಪಿ.ರಾಜು ಮತ್ತು ಪಿ.ಚಮನ್ ಸಿಂಗ್ ರವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ಸದರಿ ದಾಖಲೆಯನ್ನು ಶಾನುಭೋಗ ಪ್ರಕಾಶ ರಾವ್ ರವರು ಬರೆದಿರುತ್ತಾರೆ. ಸದರಿ ರವರ ಸಹಿಯನ್ನು ನೋಡಿ ಗುರುತಿಸಿರುತ್ತೇನೆ. ಸದರಿ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನನ್ನ ಅತ್ತೆ ಪಿ.ಫೀರಮ್ಮ ರವರು ತಮ್ಮ ಹೆಬ್ಬಟ್ಟಿನ ಗುರುತನ್ನು ಹಾಕಿರುತ್ತಾರೆ ಅದನ್ನು ನೋಡಿ ಗುರುತಿಸಿರುತ್ತೇನೆ.

ಇ.ಸಿ ದಾಖಲೆಯನ್ನು ನಿಪಿ-4 ಎಂದು, ಎರಡು ಪಹಣಿ ದಾಖಲೆಗಳನ್ನು ನಿಪಿ-5 ಮತ್ತು 6 ಎಂದು, ಸ್ಕೆಚ್ ನ್ನು ನಿಪಿ-7 ಎಂದು, ಅಸಲು ದಾವೆ ಸಂಖ್ಯೆ 28/2009 ರ ವಾದ ಪತ್ರದ ದೃಢಿಕೃತ ಪ್ರತಿಯನ್ನು ನಿಪಿ- 8 ಎಂದು, ಸದರಿ ದಾವೆಯ ತೀರ್ಪು ಮತ್ತು ಡಿಕ್ರಿಯ ದೃಢಿಕೃತ ಪ್ರತಿಗಳನ್ನು ನಿಪಿ-9 ಎಂದು, ಕರ್ನಾಟಕ ಸ್ಟೇಟ್ ಕಾರ್ಪೊರೇಷನ್ ರವರು ನೀಡಿದ ರಸೀದಿಯನ್ನು ನಿಪಿ-10 ಎಂದು, ಓಎಸ್ ನಂ.21/2011 ರ ಆದೇಶ ಪುಟಗಳ ದೃಢಿಕೃತ ಪ್ರತಿಯನ್ನು ನಿಪಿ-11 ಎಂದು, ದಿನಾಂಕ 30.07.2012 ರ ಕ್ರಯ ಪತ್ರದ ದೃಢಿಕೃತ ಪ್ರತಿಯನ್ನು ನಿಪಿ- 12 ಎಂದು,

ನೋಟಿಸ್ ನ ಕಛೇರಿ ಪ್ರತಿಯನ್ನು ನಿಪಿ-13 ಎಂದು, ಅಂಚೆ ರಸೀದಿಯನ್ನು ನಿಪಿ- 14 ಎಂದು, ಅಂಚೆ ಸ್ವಿಕೃತಿಯನ್ನು ನಿಪಿ-15 ಎಂದು , ಆಸ್ತಿ ತೆರಿಗೆಯ ರಿಜಿಸ್ಟರ್ ನ ದೃಢಿಕೃತ ಪ್ರತಿಯನ್ನು ನಿಪಿ-16 ಎಂದು, ಸ್ವಯಂ ಘೋಷಣಾ ಪಟ್ಟಿಯ ದೃಢಿಕೃತ ಪ್ರತಿಯನ್ನು ನಿಪಿ- 17 ಎಂದು, ಎಂ.ಆರ್ ದಾಖಲೆಯನ್ನು ನಿಪಿ-18 ಎಂದು, ಓಎಸ್ ನಂ.172/2003 ರ ತೀರ್ಪು ಮತ್ತು ಡಿಕ್ರಿಯ ದೃಢಿಕೃತ ಪ್ರತಿಯನ್ನು ನಿಪಿ-19 ಎಂದು ಗುರುತಿಸಲಾಯಿತು.

**(ಮುಂದುವರೆದ ಮುಖ್ಯವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ,**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**